**ಓ.ಎಸ್.ನಂ : 87/2013**
ಪಿ ಡಬ್ಲ್ಯು-1

ದಿ.17.04.2021 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು : 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಡಿ.ಜೆ.ಆರ್. ವಕೀಲರಿಂದ**

ನನ್ನ ತಂದೆಯವರು ಮೇಷ್ಟು ಕೆಲಸ ಮಾಡುತ್ತಿದ್ದರು. ನನ್ನ ತಂದೆ 1978 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತ ಇರುವ ಕಾಲಕ್ಕೆ ಇನ್ಸುರೆನ್ಸ್ ಪಾಲಿಸಿಗಳನ್ನು ಮಾಡಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ಸರ್ಕಾರದಿಂದ ಸೌಲತ್ತುಗಳನ್ನು ನೀಡಲಾಗಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಿಮ್ಮ ತಾಯಿ ಯವರು ಕೊಂಡ್ಲಹಳ್ಳಿ ಗ್ರಾಮ ಹಾಗೂ ಬಿ.ಜಿ. ಕೆರೆಯಲ್ಲಿ ಉಣ್ಣೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿ ಕೊಂಡ್ಲಹಳ್ಳಿಯಲ್ಲಿ ಮಾತ್ರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಾಯಿಯವರು ಉಣ್ಣೆ ವ್ಯಾಪಾರ ಮಾಡುತ್ತಿದ್ದುದರಿಂದ ಕೊಂಡ್ಲಹಳ್ಳಿ ಗ್ರಾಮದಲ್ಲಿ ಆಸ್ತಿಯನ್ನು ಸಂಪಾದಿಸಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನನ್ನ ಯಜಮಾನರು  ಕಿರಾಣಿ ಅಂಗಡಿ ವ್ಯಾಪಾರ ಮಾಡುತ್ತಾರೆ. ನಿಮ್ಮ ಕುಟುಂಬಕ್ಕೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸರಿ. ನಿಮ್ಮ ಕುಟುಂಬಕ್ಕೆ ಜಮೀನಿನಿಂದ ಬರುವ ಆದಾಯ ಯಾವುದು ಇಲ್ಲ ಎಂದರೆ ಸರಿ. ನನ್ನ ತಾಯಿ 2008 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ನಿಮ್ಮ ತಾಯಿ ಬದುಕಿದ್ದಾಗ ನಿಮ್ಮ ತಾಯಿ ಹಾಗೂ ನಿಮ್ಮ ಅಣ್ಣ ಮೃತ ನೀಲಕಂಠಯ್ಯರವರಿಗೆ ವ್ಯಾಜ್ಯ ನಡೆಯುತ್ತಿತ್ತು ಎಂದರೆ ಸರಿ. ಓ.ಎಸ್. ನಂ. 21/1997 ರಂತೆ ಚಿತ್ರದುರ್ಗದ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿತ್ತು ಎಂದರೆ ಸರಿ. ಸದರಿ ವ್ಯಾಜ್ಯ ಚಳ್ಳಕೆರೆ ನ್ಯಾಯಾಲಯದಲ್ಲೂ ಕೆಲವು ದಿನಗಳ ಕಾಲ ನಡೆಯಿತು ಎಂದರೆ ಸರಿ.

ವ್ಯಾಜ್ಯ ಮಾಡುವ ಕಾಲಕ್ಕೆ ನಿಮ್ಮ ತಾಯಿ ನಿಮೊಂದಿಗೆ ವಾಸವಿದ್ದರು ಎಂದರೆ ಸಾಕ್ಷಿ ಕೊಂಡ್ಲಹಳ್ಳಿಯಲ್ಲಿ ಇದ್ದರು ಎಂದು ಹೇಳುತ್ತಾರೆ. ಕೊಂಡ್ಲಹಳ್ಳಿಯಲ್ಲಿ ನಿಮ್ಮ ತಾಯಿಗೆ ಸೇರಿದ ಮನೆ ಇದೆಯೇ ಎಂದರೆ ಸಾಕ್ಷಿ ಬಾಡಿಗೆ ಮನೆಯಲ್ಲಿದ್ದರು ಎಂದು ಹೇಳುತ್ತಾರೆ. ಕೊಂಡ್ಲಹಳ್ಳಿಯಿಂದ ಬಿ.ಜಿ.ಕೆರೆ ಗ್ರಾಮ 6 ಕಿ.ಮೀ ದೂರದಲ್ಲಿದೆ. ನನ್ನ ತಾಯಿ ಗಂಡನ ಮನೆ ಜಾಜೂರು ಗ್ರಾಮದಲ್ಲಿದೆ. ನಿಮ್ಮ ತಾಯಿಗೆ ಗಂಡನ ಮನೆ ಜಾಜೂರು ಗ್ರಾಮದಲ್ಲಿದ್ದು, ಕೊಂಡ್ಲಹಳ್ಳಿಯಲ್ಲಿ ವಾಸ ಮಾಡುವ ಅವಶ್ಯಕತೆ ಏನಿತ್ತು ಎಂದರೆ ಸಾಕ್ಷಿ ನನ್ನ ಅಣ್ಣ, ನನ್ನ ತಾಯಿಯನ್ನು ಸೇರಿಸದೇ ಇದ್ದುದರಿಂದ ಕೊಂಡ್ಲಹಳ್ಳಿಯಲ್ಲಿಹೋಗಿ ವಾಸಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಾಯಿ ಕೊಂಡ್ಲಹಳ್ಳಿ ಗ್ರಾಮದಲ್ಲಿ ಯಾರ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಕೊಂಡ್ಲಹಳ್ಳಿ ಗ್ರಾಮದಲ್ಲಿ ಸುಮಾರು 10 ವರ್ಷಗಳ ಕಾಲ ಇದ್ದರು. ನಿಮ್ಮ ತಾಯಿಯ ಜೀವಂತ ಕಾಲದಲ್ಲಿ ನಿಮಗೂ ಹಾಗೂ ನಿಮ್ಮ ತಾಯಿಗೂ ಯಾವುದೇ ದ್ವೇಷ ಇರಲಿಲ್ಲ ಎಂದರೆ ಸರಿ.

ನಿಮ್ಮ ತಾಯಿ ಜಾಜೂರು ಗ್ರಾಮದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ . ಈಗಲೂ ಸಹ ನಿಮ್ಮ ತಾಯಿಯ ಹೆಸರಿನಲ್ಲಿ ಕೊಂಡ್ಲಹಳ್ಳಿ ಗ್ರಾಮದಲ್ಲಿ ನಿವೇಶನಗಳು ಇವೆ ಎಂದರೆ ಸರಿ. ಸದರಿ ನಿವೇಶನಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಕೊಂಡ್ಲಹಳ್ಳಿ ಗ್ರಾಮದಲ್ಲಿರುವ ನಿವೇಶನಗಳನ್ನು ನೀವು ಲಪಟಾಯಿಸುವ ಉದ್ದೇಶದಿಂದ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಮದುವೆ 1977 ರಲ್ಲಿ ಆಯಿತು. ನಾನು ಸಹಿಯನ್ನು ಮಾಡುತ್ತೇನೆ. ನನ್ನ ಮದುವೆಯ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರು. ನಿಮ್ಮ ಮದುವೆಯ ಕಾಲದಲ್ಲಿ ನಿಮಗೆ ಏನೇನು ಆಸ್ತಿಗಳನ್ನು ಕೊಡಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಸರಿ. ಸದರಿ ಮಾತುಕತೆಯಂತೆ ನಿಮಗೆ ಆಸ್ತಿಗಳನ್ನು ಕೊಡದೇ ಇದ್ದುದರಿಂದ 1978 ರಲ್ಲಿ ವ್ಯಾಜ್ಯ ಬಂತು ಎಂದರೆ ಸರಿ.

ಮಲ್ಲಯ್ಯ, ವಿರುಪಾಕ್ಷಯ್ಯ, ಕರೆಈರಣ್ಣ, ಎನ್.ಹನುಮಂತಪ್ಪ ಮತ್ತು ಹುಲಿಗೆಪ್ಪ ರವರ ಸಮಕ್ಷಮದಲ್ಲಿ 1978 ರಲ್ಲಿ ಪಂಚಾಯಿತಿ ಮಾಡಲಾಗಿತ್ತು ಎಂದರೆ ಸರಿ. ಸದರಿ ಪಂಚಾಯಿತಿಯಲ್ಲಿ ಪಂಚರ ಸಮಕ್ಷಮ ಕರಾರು ಪತ್ರವನ್ನು ಸಹ ಮಾಡಲಾಗಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 5 ತೊಲದ ಬಂಗಾರದ ಅವಲಕ್ಕಿ ಸರ, 1 ತೊಲದ 2 ಬಂಗಾರದ ಉಂಗುರ, 1 ತೊಲದ ಕುಚ್ಚು ನಾಗರದ ಬಂಗಾರ, 2 ತೊಲದ ಬಂಗಾರದ ಚೈನು, 1 ತೊಲದ ಕೊರಳ ಚೈನು ಮತ್ತು ನಗದಾಗಿ ರೂ. 15,000/- ಗಳನ್ನು ನಿಮ್ಮ ಭಾಗಕ್ಕೆ ಪಂಚಾಯಿತಿಯಲ್ಲಿ ನೀಡುವಂತೆ ಆದ ಮಾತುಕತೆಯಂತೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಕರಾರು ಪತ್ರಕ್ಕೆ ಮೇಲೆ ಹೇಳಿದ ಒಡವೆಗಳನ್ನು ಪಡೆದಿದ್ದೇನೆ ಎಂದು ನೀವು ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರಕ್ಕೆ ನಿಮೊಂದಿಗೆ ಪಂಚರು ಸಹ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಪ್ರತಿವಾದಿ ವಕೀಲರು ಕಾಲಾವಕಾಶ ಕೋರಿದ್ದು, ಆಲಿಸಿ ಅನುಮತಿಸಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಚಳ್ಳಕೆರೆ.